



# ಹಳೇ ಜೋಡಿ, ಹೊಸ ಮೋಡಿ

ಅಮಿತಾಭ್ ಬಚ್ಚನ್ ಮಾಡಿದಷ್ಟು ವೈವಿಧ್ಯಮಯ ಪಾತ್ರಗಳನ್ನು ಬಾಲಿವುಡ್‌ನಲ್ಲಿ ಸದ್ಯಕ್ಕೆ ಯಾರೂ ಮಾಡುತ್ತಿಲ್ಲ. ಅದರಲ್ಲೂ ಇತ್ತೀಚಿನ ಕೆಲವು ವರ್ಷಗಳಲ್ಲಿ ಅಮಿತಾಭ್ ತಮ್ಮ ಪಾತ್ರಗಳ ಆಯ್ಕೆಯಲ್ಲಿ ಹೆಚ್ಚು ಪ್ರೌಢರೂ ಆಗಿದ್ದಾರೆ. ಒಂದನ್ನು ಒಂದು ಮೀರಿಸುವ, ಮನುಷ್ಯನ ಎಲ್ಲ ವಿಕ್ಷಿಪ್ತ ಗುಣಗಳನ್ನೂ ಎತ್ತಿ ತೋರುವ ಪಾತ್ರಗಳ ಮೂಲಕ ಅಮಿತಾಭ್ ಸಿನಿಪ್ರೇಕ್ಷಕರಿಗೆ ಹಬ್ಬದೂಟ ನೀಡುತ್ತಿದ್ದಾರೆ. ಹಿಂದಿ ಮಾತ್ರವಲ್ಲ, ಇತರೆಲ್ಲ ಭಾಷೆಗಳಲ್ಲಿ 60 ದಾಟಿದ ನಟರಿಗೆ ಇದೊಂದು ರೀತಿಯಲ್ಲಿ ಪ್ರೇರಣೆಯೂ ಹೌದು.

ಬಾಲಿವುಡ್‌ನಲ್ಲೀಗ ಅಮಿತಾಭ್ ನಟಿಸುತ್ತಿರುವ ಹೊಸ ಚಿತ್ರ '102 ನಾಟೌಟ್' ಸುದ್ದಿ ಮಾಡುತ್ತಿದೆ. ಈ ಚಿತ್ರದಲ್ಲಿ ಅಮಿತಾಭ್ ಅವರದ್ದು 102 ವರ್ಷಗಳ ಮುದುಕನ ಪಾತ್ರ. ಆದರೆ ಈ ಮುದುಕ ಸದಾ ಜೀವನೋತ್ಸಾಹ ತುಂಬಿ ತುಳುಕುತ್ತಿರುವ ತಮಾಷೆಯ ಮುದುಕ. ಈತನ ಮಗ 75ರ ಹರೆಯದ ಸದಾ ಸಿಡುಕು ಮುಖದ, ಸಿನಿಕ. ಮಗನ ಪಾತ್ರವನ್ನು ಮಾಡುತ್ತಿರುವವರು ರಿಶಿ ಕಪೂರ್.

ಬಾಲಿವುಡ್‌ನಲ್ಲಿ ಭಾರೀ ಸುದ್ದಿ ಮತ್ತು ಹಣ ಮಾಡಿದ ಯಶಸ್ವಿ ಚಿತ್ರ 'ಓಹ್ ಮೈ ಗಾಡ್' ನ ನಿರ್ದೇಶಕ ಉಮೇಶ್ ಶುಕ್ಲಾ ಅವರೇ ಈ ಹೊಸ ಚಿತ್ರವನ್ನೂ ನಿರ್ದೇಶಿಸುತ್ತಿದ್ದಾರೆ. ಅಂದ ಹಾಗೆ '102 ನಾಟೌಟ್' ಗುಜರಾತಿ ಭಾಷೆಯಲ್ಲಿ ಅದೇ ಹೆಸರಿನ ನಾಟಕವಾಗಿ ಜನಪ್ರಿಯವಾಗಿದ್ದು, ಅದನ್ನೇ ಈಗ ಸಿನಿಮಾ ಮಾಡಲಾಗುತ್ತಿದೆ.

ಹಿಂದೆ ಅಮರ್ ಅಕ್ಬರ್ ಅಂತೋಣಿ, ಕಭೀ ಕಭೀ, ನಸೀಬ್, ಕೂಲಿ ಮುಂತಾದ ಹಿಟ್ ಚಿತ್ರಗಳಲ್ಲಿ ಒಟ್ಟಾಗಿ ನಟಿಸಿದ್ದ ಅಮಿತಾಭ್ ಮತ್ತು ರಿಶಿ, ಇದೀಗ ಮತ್ತೆ ಜೋಡಿಯಾಗಿ ಅಭಿಮಾನಿಗಳನ್ನು ರಂಜಿಸಲಿದ್ದಾರೆ. 26 ವರ್ಷಗಳ ನಂತರ ಈ ಜೋಡಿ ಮತ್ತೆ ಒಟ್ಟಿಗೆ ನಟಿಸುತ್ತಿದೆ ಎನ್ನುವುದು ವಿಶೇಷ.

ಅಮೀರ್ ಖಾನ್ ಜತೆಗೂ ಅಮಿತಾಭ್ ಹೊಸ ಚಿತ್ರ 'ಥಗ್ಸ್ ಆಫ್ ಹಿಂದೂಸ್ತಾನ್' ಎಂಬ ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ.